ದಿನಾಂಕ 06.08.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ- 1ನೇ ಪ್ರತಿವಾದಿ ಪರ ವಕೀಲರಾದ ಶ್ರೀ.ಐ.ಆರ್.ಪಿ ರವರಿಂದಃ-

ನಿ.ಪಿ-**13** ಮತ್ತು **14** ದಾಖಲೆಗಳು ಸರ್ವೆ ನಂ. **137/2** ರ ಸ್ವತ್ತಿನ ಸರ್ವೆ ಸ್ಕೆಚ್‌ಗಳು. ನಿ.ಪಿ-**14** ಹದ್ದುಬಸ್ತು ಸರ್ವೆ ಸ್ಕೆಚ್. ನನ್ನ ಗಂಡ ನೀಡಿದ ಅರ್ಜಿಯ ಮೇರೆಗೆ ಹದ್ದುಬಸ್ತು ಸರ್ವೆ ಮಾಡಿರುತ್ತಾರೆ. ಹದ್ದುಬಸ್ತು ಸರ್ವೆ ಮಾಡಿದ ನಂತರ ನಿ.ಪಿ-**14** ದಾಖಲೆಯನ್ನು ನೀಡಿರುತ್ತಾರೆ. ಹದ್ದುಬಸ್ತು ಸರ್ವೆಯನ್ನು ಯಾವಾಗ ಮಾಡಿಸಿರುತ್ತಾರೆ ಎಂಬುದು ನನಗೆ ಗೊತ್ತಿಲ್ಲ. ಸರ್ವೆ ನಂ.**137/2** ರ ಹಾಜುಬಾಜು ಸ್ವತ್ತುಗಳ ಸರ್ವೆ ನಂಬರ್ ಗಳು ನನಗೆ ಗೊತ್ತಿಲ್ಲ. ಹದ್ದುಬಸ್ತು ಸರ್ವೆ ಮಾಡಿದ ಭೂಮಾಪಕರ ಹೆಸರು ನನಗೆ ಗೊತ್ತಿಲ್ಲ. ಯಾವಾಗ ಅಳತೆ ಮಾಡಿಸಿರುತ್ತಾರೆ ಎಂಬುದು ನನಗೆ ಗೊತ್ತಿಲ್ಲ. ಅಳತೆಯಲ್ಲಿ ಏನು ಕಂಡುಬಂದಿರುತ್ತದೆ ಎಂಬುದು ನನಗೆ ಗೊತ್ತಿಲ್ಲ.

ನಿಶಾನೆ ಪಿ-**15** ಯಾವ ವರ್ಷದ ದಾಖಲೆ ಎಂಬುದು ನನಗೆ ಗೊತ್ತಿಲ್ಲ. ನಿ.ಪಿ-**17** ದಾಖಲೆಯನ್ನು ತಹಶೀಲ್ದಾರ್ ಕಛೇರಿಯಿಂದ ಪಡೆದಿರುತ್ತೇನೆ. ಅದರಲ್ಲಿ ಏನು ಬರೆದಿದೆ ಎಂಬುದು ನನಗೆ ಗೊತ್ತಿಲ್ಲ. ನಿ.ಪಿ-**18** ಸರ್ವೆ ನಂ. **137/2** ರ ಸ್ವತ್ತಿನ ಜಮಾಬಂಧಿ ದಾಖಲೆ. ನಿ.ಪಿ-**21** ರಲ್ಲಿ ಸರ್ವೆ ನಂ.**137/2** ರ ಸ್ವತ್ತಿನ ಬಗ್ಗೆ ನಮೂದು ಇದೆ. ನಿ.ಪಿ-**12** ರಿಂದ **21** ರ ದಾಖಲೆಗಳ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ- ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

(ಸಾಕ್ಷಿದಾರರ ಸಹಿ) ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು
ವಿರಾಜಪೇಟೆ.